**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ .**

**ಸ್ಪೇಷಲ್ ಕೇಸ್ ನಂ.700/2023**

**ದಿನಾಂಕಃ 18 ನೇ ಜನವರಿ 2025**

**ಫಿರ್ಯಾದುದಾರರು** ಃ ಹೊನ್ನಾಳಿ ಪೊಲೀಸ್ ಠಾಣೆ.

-/ **ವಿರುದ್ಧ** /-

**ಆರೋಪಿ /ತರು** ಃ ರಾಮನಗೌಡ ಮತ್ತು ಇನ್ನೊಬ್ಬರು

**ದೋಷಾರೋಪಣೆ**

ಶ್ರೀಯುತ ಃ **ಎಂ.ಹೆಚ್. ಅಣ್ಣಯ್ಯನವರ** ಬಿಕಾಂ.ಎಲ್.ಎಲ್.ಬಿ. (ವಿಶೇಷ), 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ, ಆದ ನಾನು ನಿಮ್ಮನ್ನು ಅಂದರೆ,

1. ರಾಮನಗೌಡ ಬಿನ್ ಗುರುನಾಥ, ವಯಸ್ಸು 30 ವರ್ಷ, ವ್ಯವಸಾಯ ವೃತ್ತಿ, ವಾಸ ಕೋಣನತಲೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ.
2. ದೇವರಾಜ ಬಿನ್ ಶಿವಪ್ಪ, ವಯಸ್ಸು 28 ವರ್ಷ, ವ್ಯವಸಾಯ ವೃತ್ತಿ, ವಾಸ ಕೋಣನತಲೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ.

ಆರೋಪಿಗಳಾದ ನಿಮ್ಮ ಮೇಲಿನ ದೋಷಾರೋಪಣೆ ಈ ಕೆಳಕಂಡಂತೆ ಇರುತ್ತದೆ.

ದಿನಾಂಕಃ 02/03/2018 ರಂದು ರಾತ್ರಿ 10-30 ಗಂಟೆ ಸಮಯದಲ್ಲಿ, ಹೊನ್ನಾಳಿ ತಾಲ್ಲೂಕು, ಕೋಣನತಲೆ ಗ್ರಾಮದ ಹತ್ತಿರದ ಭೈರನಪಾದ(ಬೇಚಾರ) ಗ್ರಾಮದ ನದಿಯ ದಡದಲ್ಲಿರುವ ಈಶ್ವರ ದೇವಸ್ಥಾನದ ಹತ್ತಿರವಿರುವ ಎಫ್.5 ಕೋಣನತಲೆ 11 ಕೆವಿ ಕಂಬದಲ್ಲಿ ಸುಮಾರು 2015 ನೇ ಸಾಲಿನಿಂದ ಈವರೆಗೆ

ಆರೋಪಿತರಾದ ನೀವು ಸಮಾನ ಉದ್ದೇಶದಿಂದ ನಿರಂತರ ಜ್ಯೋತಿಯ ವಿದ್ಯುತ್ ತಂತಿಗಳಿಂದ 4,77,931/- ರೂ. ನಷ್ಟು ಕರೆಂಟನ್ನು ಮೋಟಾರ್ ಲೈನ್‌ಗೆ ಬದಲಾಯಿಸಿಕೊಂಡು ಹೊಲಗಳಿಗೆ ನೀರನ್ನು ಹಾಯಿಸಿಕೊಂಡು ಭತ್ತ ಹಾಗೂ ತರಕಾರಿ ಬೆಳೆಯುವ ಉದ್ದೇಶದಿಂದ ವಿದ್ಯುತ್ ಕಳ್ಳತನ ಮಾಡಿರುತ್ತೀರಿ. ಹಾಗಾಗಿ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.379 ಸಹ ಕಲಂ 34 ಮತ್ತು ಇಂಡಿಯನ್ ಎಲೆಕ್ಟ್ರೀಷಿಯನ್ ಆಕ್ಟ 135 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಈಶ್ವರ ದೇವಸ್ಥಾನದ ಹತ್ತಿರವಿರುವ ಎಫ್.5 ಕೋಣನತಲೆ 11 ಕೆವಿ ಕಂಬದಲ್ಲಿ ಜಂಪ್ ತೆಗೆದು ಇಳಿದು ಬರುವಾಗ ಚಾಸಾ.8 ಹನುಮಂತ ಮತ್ತು ಚಾಸಾ.9 ಚನ್ನಗೌಡ ಪಾಟೀಲ್‌ರವರಿಗೆ ನೇರವಾಗಿ ಸಿಕ್ಕಿ ಬಿದ್ದಿದ್ದು, ಈ ಬಗ್ಗೆ ಆರೋಪಿತರಿಗೆ ವಿಚಾರಿಸಿದಾಗ ಆರೋಪಿತರಾದ ನೀವು ಚಾಸಾ.8 ಹನುಮಂತ ಮತ್ತು ಚಾಸಾ.9 ಚನ್ನಗೌಡ ಪಾಟೀಲ್‌ರವರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸದಂತೆ ಅಡ್ಡಿಪಡಿಸಿರುತ್ತಾರೆ. ಹಾಗಾಗಿ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.353 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.8 ಹನುಮಂತ ಮತ್ತು ಚಾಸಾ.9 ಚನ್ನಗೌಡ ಪಾಟೀಲ್ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಮಾಡಿರುತ್ತೀರಿ, ಹಾಗಾಗಿ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.504 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.8 ಹನುಮಂತ ಮತ್ತು ಚಾಸಾ.9 ಚನ್ನಗೌಡ ಪಾಟೀಲ್ ರವರನ್ನು ದೂಡಿ ಬೀಳಿಸಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಹಾಗಾಗಿ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.323 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ.8 ಹನುಮಂತ ಮತ್ತು ಚಾಸಾ.9 ಚನ್ನಗೌಡ ಪಾಟೀಲ್

ರವರಿಗೆ ಕೊಲೆ ಬೆದರಿಕೆ ಹಾಕಿರುತ್ತೀರಿ, ಹಾಗಾಗಿ ಆರೋಪಿತರಾದ ನೀವು ಭಾ.ದಂ.ಸಂ. ಕಲಂ.506 ಸಹ ಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲಿನ ಆರೋಪಕ್ಕೆ ನಿಮ್ಮನ್ನು ಗುರಿಪಡಿಸಿ ಈ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಬೇಕೆಂದು ನಿರ್ದೇಶಿಸಲಾಗಿದೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ**

**ಸ್ಪೇಷಲ್ ಕೇಸ್ ನಂ.700/2023**

2. ದೇವರಾಜ ಬಿನ್ ಶಿವಪ್ಪ, ವಯಸ್ಸು 28 ವರ್ಷ, ವ್ಯವಸಾಯ ವೃತ್ತಿ, ವಾಸ ಕೋಣನತಲೆ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ.

**ಆರೋಪಣೆ**

ಪ್ರಶ್ನೆ 1 ಈಗ ಓದಿ ಹೇಳಿದ ಅಪಾದನೆ ನಿನಗೆ ತಿಳಿಯಿತೆ?

ಉತ್ತರ ಃ

ಪ್ರಶ್ನೆ 2 ನೀನು ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೇ?

ಉತ್ತರ ಃ

(ಮೇಲೆ ನಮೂದು ಮಾಡಿದ ಆರೋಪಿಯ ಹೇಳಿಕೆಯನ್ನು ತನ್ನ ಸಮಕ್ಷಮದಲ್ಲಿ ತೆಗೆದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿ ನೀಡಿದ ನಿಜವಾದ ಹೇಳಿಕೆ ಇರುತ್ತದೆ.)

(ಎಂ.ಹೆಚ್.ಅಣ್ಣಯ್ಯನವರ್ )
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.